ಮೇಲೆ ತೆಳುವಾಗಿ ಹರಡಿ ಶಿಫಾರಸ್ಸು ಮಾಡಿರುವ ಪ್ರಮಾಣದಲ್ಲಿ ಶಿಲೀಂಧ್ರನಾಶಕವನ್ನು ಹಾಕಿ ಕೈಚೀಲ ಧರಿಸಿದ ಕೈಯಿಂದ ಹದವಾಗಿ ಮಿಶ್ರಮಾಡಿ ಬಿತ್ತನೆ ಮಾಡುವುದು.

- **ವಿಧಾನ 4: ಕೆಸರು ಸಸಿಮಡಿ, ಡ್ರಂ ಸೀಡರ್ ಮತ್ತು ನೇರ ಬಿತ್ತನೆಗೆ**

  ಭತ್ತದ ಸಸಿಮಡಿಯಲ್ಲಿ ಕಾಣಿಸಿಕೊಳ್ಳುವ ಬೀಜದಿಂದ ಪ್ರಸಾರವಾಗುವ ಬೆಂಕಿ ಮತ್ತು ಕಂದು ಚುಕ್ಕೆ ರೋಗಗಳ ಹಾಗೂ ದುಂಡಾಣು ಅಂಗಮಾರಿ ರೋಗದ ನಿರ್ವಹಣೆಗಾಗಿ ಪ್ರತಿ ಎಕರೆಗೆ ಶಿಫಾರಸ್ಸು ಮಾಡಿರುವ ಬಿತ್ತನೆ ಬೀಜವನ್ನು ಪೀಡೆ ಶಿಲೀಂಧ್ರನಾಶಕದ ದ್ರಾವಣದಲ್ಲಿ 12 ಗಂಟೆಗಳ ಕಾಲ ನೆನೆಸಿ, ನಂತರ 24–48 ಗಂಟೆಗಳ ಕಾಲ ಒದ್ದೆಯಾದ ಗೋಣಿ ಚೀಲದಲ್ಲಿ ಕಟ್ಟಿ ಕುಡಿ ಮೊಳಕೆ ಕಾಣಿಸಿಕೊಂಡಾಗ ಬಿತ್ತನೆ ಮಾಡುವುದು. ಸೂಚನೆ (1 ಕಿ.ಗ್ರಾಂ. ಬಿತ್ತನೆ ಬೀಜವನ್ನು ನೆನಸಲು 1 ಲೀಟರ್ ನೀರು ಬೇಕಾಗುತ್ತದೆ).

**ಸೂಚನೆ:**

1. ಕೀಟ ಹಾಗೂ ರೋಗ ಬಾಧೆಯ ಲಕ್ಷಣಗಳು ಕಂಡುಬಂದಲ್ಲಿ ಮಾತ್ರ ಸಸ್ಯ ಸಂರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳುವುದು. ಯಾವ ಪ್ರದೇಶದಲ್ಲಿ ಕೀಟ ಮತ್ತು ರೋಗ ಬಾಧೆ ಪ್ರತಿ ವರ್ಷವೂ ತಪ್ಪದೆ ಬರುತ್ತದೆಯೋ ಅಂತಹ ಪ್ರದೇಶಗಳಲ್ಲಿ ಕೀಟ ಹಾಗೂ ರೋಗಗಳು ಕಾಣಿಸಿಕೊಳ್ಳುವುದಕ್ಕೆ ಮೊದಲೇ ಸಸ್ಯ ಸಂರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳುವುದು. ಮುಖ್ಯವಾಗಿ ಕುತ್ತಿಗೆ ಬೆಂಕಿರೋಗಕ್ಕೆ ಹೂ ಬಿಡುವ (ಶೇ.5%) ಮೊದಲೇ ಸಿಂಪರಣೆ ಕೈಗೊಳ್ಳುವುದು ಉತ್ತಮ.
2. ಶಿಫಾರಸ್ಸು ಮಾಡಿರುವ ಸಸ್ಯ ಸಂರಕ್ಷಣಾ ರಸಾಯನಿಕಗಳ ಪ್ರಮಾಣ ಕೈ ಚಾಲಿತ (ದೊಡ್ಡ ಪ್ರಮಾಣದ) ಸಿಂಪರಣ ಯಂತ್ರಗಳಿಗೆ ಮಾತ್ರ ಅನ್ವಯಿಸುತ್ತದೆ.
3. ಹೊಂದಾಣಿಕೆ ಇರುವ ಕೀಟನಾಶಕ ಮತ್ತು ಶಿಲೀಂಧ್ರನಾಶಕಗಳನ್ನು ಬೆರೆಸಿ, ಒಟ್ಟಿಗೆ ಸಿಂಪರಣೆ ಮಾಡುವುದು.
4. ಸಿಂಪರಣೆ ದ್ರಾವಣಕ್ಕೆ ಬೇಕಾಗಿರುವ ನೀರಿನ ಪ್ರಮಾಣ ಬೆಳೆಯ ಹಂತದ ಮೇಲೆ ನಿರ್ಧಾರವಾಗುತ್ತದೆ. ಅದುದರಿಂದ ನೀರನ್ನು 150–200 ಲೀಟರ್ ಪ್ರಮಾಣ ಉಪಯೋಗಿಸಬಹುದು.

## 4.1 ಏರೋಬಿಕ್ (ಅರೆ ನೀರಾವರಿ) ಪದ್ಧತಿಯಲ್ಲಿ ಭತ್ತದ ಬೇಸಾಯ

ಭೂಮಿಯನ್ನು ಹದಮಾಡಿಕೊಂಡು ರಾಗಿ, ಜೋಳ ಅಥವಾ ಗೋಧಿಯಂತೆ ನೇರವಾಗಿ ಬಿತ್ತನೆ ಮಾಡಿ ಜಮೀನಿನಲ್ಲಿ ನೀರು ನಿಲ್ಲಿಸದೆ ತೇವಾಂಶವನ್ನು ಕಾಪಾಡಿಕೊಂಡು ಬೆಳೆಯುವ ವಿಧಾನಕ್ಕೆ ಏರೋಬಿಕ್ ಪದ್ಧತಿ ಎಂದು ಕರೆಯಲಾಗುತ್ತದೆ. ಏರೋಬಿಕ್ ಪದ್ಧತಿಯಲ್ಲಿ ಭತ್ತವನ್ನು ಬೆಳೆಯುವುದರಿಂದ ಮಣ್ಣಿನ ಆರೋಗ್ಯ ಕಾಪಾಡಿಕೊಂಡು ಪರಿಕರಗಳ ಬಳಕೆ ದಕ್ಷತೆಯನ್ನು ಹೆಚ್ಚಿಸಬಹುದು. ಈ ಪದ್ಧತಿಯಲ್ಲಿ ನೀರಿನ ಬಳಕೆಯಲ್ಲಿ ಶೇಕಡ 40 ರಿಂದ 50 ರವರೆಗೆ ಉಳಿತಾಯ ಮಾಡಬಹುದು.

**ಬಿತ್ತನೆ ಪ್ರಮಾಣ :** ಪ್ರತಿ ಎಕರೆಗೆ ಕೈಯಿಂದ ಊರುವುದಕ್ಕೆ 3 ಕಿ.ಗ್ರಾಂ . ಹಾಗೂ ಕೂರಿಗೆ ಬಿತ್ತನೆಗೆ 8–10 ಕಿ.ಗ್ರಾಂ. ಉಪಯೋಗಿಸುವುದು.

**ಅಂತರ :** ಸಾಲಿನಿಂದ ಸಾಲಿಗೆ 12 ಅಂಗುಲ ಗಿಡದಿಂದ ಗಿಡಕ್ಕೆ 10–12 ಅಂಗುಲ, ನಾಟಿ ಭತ್ತಕ್ಕೆ ಶಿಫಾರಸ್ಸು ಮಾಡಿರುವ ಸಾವಯವ ಮತ್ತು ರಸಾಯನಿಕ ಗೊಬ್ಬರಗಳನ್ನು ಬಳಸುವುದು. ಜೊತೆಗೆ ಪ್ರತಿ ಬೆಳೆಗೆ ಎಕರೆಗೆ 8 ಕಿ.ಗ್ರಾಂ. ಸತುವಿನ ಸಲ್ಫೇಟ್ ಮತ್ತು 5 ಕಿ.ಗ್ರಾಂ . ಕಬ್ಬಿಣದ ಸಲ್ಫೇಟ್ ಅನ್ನು ಬಳಸುವುದು.

**ಭೂಮಿ ಸಿದ್ಧತೆ:** ನೇಗಿಲಿನಿಂದ ಆಳವಾಗಿ ಎರಡು ದಿಕ್ಕಿನಲ್ಲಿ ಉಳುಮೆ ಮಾಡಿ ಚೆನ್ನಾಗಿ ಕಳೆತ ಸಾವಯವ ಗೊಬ್ಬರವನ್ನು ಎಕರೆಗೆ 4 ಟನ್‌ನಂತೆ ಮಣ್ಣಿಗೆ ಸೇರಿಸಿ ಹಲುಬೆಯಿಂದ ಸಮ ಮಾಡಿಕೊಳ್ಳುವುದು.

**ಬಿತ್ತನೆ ಕಾಲ ಮತ್ತು ವಿಧಾನ:** ಇತರೆ ನೀರಾವರಿ ಬೆಳೆಗಳಂತೆ ಈ ಬೆಳೆಯನ್ನು ಕೂಡ ಹದವಾದ ಭೂಮಿಯಲ್ಲಿ ಮುಂಗಾರು (ಜೂನ್–ಜುಲೈ) ಮತ್ತು ಬೇಸಿಗೆಯಲ್ಲಿ (ಫೆಬ್ರವರಿ 2ನೇ ವಾರದೊಳಗೆ) ಬೀಜವನ್ನು ನೇರ ಬಿತ್ತನೆ

## ಸಸ್ಯ ಸಂರಕ್ಷಣೆ : ಪ್ರಮುಖ ರೋಗಗಳು ಹಾಗೂ ನಿರ್ವಹಣೆ

| ರೋಗಗಳು | ಮುಖ್ಯವಾದ ಚಿಹ್ನೆಗಳು | ರೋಗ ನಾಶಕಗಳು | ಮಿ.ಲೀ./ಗ್ರಾಂ ಲೀಟರ್ ನೀರಿಗೆ | ಮಿ.ಲೀ./ ಕಿ.ಗ್ರಾಂ ಎಕರೆಗೆ (ಪ್ರತಿ ಸಿಂಪರಣೆಗೆ) | ಉಪಯೋಗಿಸಬೇಕಾದ ಕಾಲ/ ವಿಧಾನ |
|---|---|---|---|---|---|
| **ದುಂಡಾಣು ಅಂಗಮಾರಿ ರೋಗ** | ತೆನೆಯ ಅಂಚಿನ ಗರಿಗಳು ಒಣಗಿದಂತಾಗಿ ತುದಿ ಹೆಡೆಯಂತೆ ಬಾಗಿರುತ್ತವೆ. ಎಲೆಯ ಅಂಚಿನಲ್ಲಿ ಉದ್ದನೆಯ ಒಣಗಿದ ಪಟ್ಟಿಗಳು ಕಂಡುಬರುತ್ತವೆ | ಸ್ಟ್ರೆಪ್ಟೋಸೈಕ್ಲಿನ್<br>ಕೆ.ಸೈಕ್ಲಿನ್ ಅಥವಾ<br>ಸ್ಟ್ರೆಪ್ಟೋಸೈಕ್ಲಿನ್ ಮತ್ತು<br>ತಾಮ್ರದ ಆಕ್ಸಿಕ್ಲೋರೈಡ್50ಡಬ್ಲೂಪಿ | 0.5 ಗ್ರಾಂ.<br>8 ಗ್ರಾಂ.<br>0.3 ಗ್ರಾಂ.<br>2.5 ಗ್ರಾಂ. | 25 ಗ್ರಾಂ.<br>25 ಕೆ.ಜಿ. ಬೀಜಕ್ಕೆ<br>100 ಗ್ರಾಂ.+<br>500 ಗ್ರಾಂ. | ಬೀಜೋಪಚಾರ: 1) 25 ಗ್ರಾಂ. ರಾಸಾಯನಿಕವನ್ನು 50 ಲೀಟರ್ ನೀರಿನಲ್ಲಿ ಕರಗಿಸಿ 25 ಕೆ.ಜಿ. ಬಿತ್ತನೆ ಬೀಜವನ್ನು 24 ಗಂಟೆಗಳ ಕಾಲ ನೆನೆಸಿ, ನೆರಳಿನಲ್ಲಿ ಒಣಗಿಸಿ ಬಿತ್ತನೆ ಮಾಡಿ.<br>2) ನಾಟಿ ಮಾಡಿದ 25 (200 ಲೀ. ದ್ರಾವಣ) 50ನೇ ದಿನ (200 ಲೀ. ದ್ರಾವಣ) ಮತ್ತು ಕಾಳು ಕಟ್ಟುವ (200 ಲೀ. ದ್ರಾವಣ) ಸಮಯದಲ್ಲಿ ಸಿಂಪಡಿಸಬೇಕು |
| **ಕಂದು ಚುಕ್ಕೆ ರೋಗ** | ಎಲೆ,ಎಲೆಗಳ ಮತ್ತು ಕಾಳುಗಳ ಮೇಲೆ ಮೊಟ್ಟೆಯಾಕಾರದ ಕಂದು ಚುಕ್ಕೆಗಳು ಕಂಡುಬರುತ್ತದೆ | ಮ್ಯಾಂಕೋಜೆಬ್ 63%ಡಬ್ಲೂಪಿ+<br>ಕಾರ್ಬೆಂಡಜಿಂ 12%ಸಂಯುಕ್ತ<br>ಶಿಲೀಂಧ್ರನಾಶಕ<br>ಕಾರ್ಬೆಂಡಜಿಂ50ಡಬ್ಲೂಪಿ | 2 ಗ್ರಾಂ.<br><br><br>2 ಗ್ರಾಂ. | 50 ಗ್ರಾಂ.<br>25 ಕಿ.ಗ್ರಾಂ. ಬೀಜಕ್ಕೆ<br><br>400 ಗ್ರಾಂ. | 2 ಗ್ರಾಂ. ಶಿಲೀಂಧ್ರನಾಶಕವನ್ನು ಪ್ರತಿ ಕಿ.ಗ್ರಾಂ. ಬೀಜಕ್ಕೆ ಉಪಯೋಗಿಸಿ ಬೀಜೋಪಚಾರ ಮಾಡಿ.<br><br>ನಾಟಿ ಮಾಡಿದ 25ನೇ ದಿನ, (200 ಲೀಟರ್ ದ್ರಾವಣ) 50ನೇ ದಿನ ಮತ್ತು ಕಾಳು ಕಟ್ಟುವ ಸಮಯದಲ್ಲಿ ಸಿಂಪಡಿಸಬೇಕು |
| **ಊದುಬತ್ತಿ ರೋಗ** | ಗರಿಗಳು ಬಿಳಿಯ ಬಣ್ಣದಿಂದ ಹೊಳೆಯುತ್ತವೆ ಮತ್ತು ಊದುಬತ್ತಿಯಂತಹ ತೆನೆಗಳು ಕಾಣಿಸುತ್ತವೆ | ಕಾರ್ಬೆಂಡಜಿಂ 50%ಡಬ್ಲ್ಯೂಪಿ /<br>ಮ್ಯಾಂಕೋಜೆಬ್ 75ಡಬ್ಲೂಪಿ | 4 ಗ್ರಾಂ. | 100 ಗ್ರಾಂ./25 ಕೆ.ಜಿ. ಬೀಜಕ್ಕೆ | ಬಿತ್ತನೆ ಬೀಜ (200 ಲೀಟರ್ ದ್ರಾವಣ)ವನ್ನು ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಿ ಬಿತ್ತಬೇಕು. ರೋಗ ಪೀಡಿತ ಪೈರುಗಳನ್ನು ಕಿತ್ತು ನಾಶ ಪಡಿಸಿ<br>ಸಸಿಮಡಿಗೆ ಬಿತ್ತನೆ ಬೀಜವನ್ನು (ಒಣ ಅಥವಾ ಮೊಳಕೆ ಬರಿಸಿದ) ಬಿತ್ತುವ ಒಂದು ದಿವಸ ಮೊದಲೇ 1 ಕೆ.ಜಿ. ಬೀಜಕ್ಕೆ 4 ಗ್ರಾಂ. ಕಾರ್ಬೆಂಡಜಿಂ 12%ಮತ್ತು ಮ್ಯಾಂಕೋಜೆಬ್63% ಮಿಶ್ರಣದಿಂದ ಬೀಜೋಪಚಾರ |

# ಭತ್ತಕ್ಕೆ ಬರುವ ಪ್ರಮುಖವಾದ ರೋಗಗಳು



ಕಂದು ಚುಕ್ಕೆ ರೋಗ



ದುಂಡಾಣು ಅಂಗಮಾರಿ ರೋಗ



ಊದುಬತ್ತಿ ರೋಗ



ಎಲೆ ಕವಚ ಒಣಗುವ ರೋಗ

| | | | | | |
|---|---|---|---|---|---|
| **ಬೆಂಕಿ ರೋಗ** | ಗರಿಗಳ ಮೇಲೆ ವಜ್ರಾಕಾರದ ಕಂದು ಚುಕ್ಕೆಗಳುಂಟಾಗಿ, ಆ ಚುಕ್ಕೆಗಳ ಮಧ್ಯಭಾಗವು ಬೂದಿ ಬಣ್ಣ ಹೊಂದಿರುತ್ತವೆ. ತೆನೆಯ ಕುತ್ತಿಗೆಯ ಭಾಗದಲ್ಲಿ ಕಪ್ಪು ಮಚ್ಚೆ ಕಂಡು ಬಂದು, ನಂತರ ಕಾಳು ಒಣಗಿ ಜೊಳ್ಳಾಗುತ್ತವೆ | ಕಾರ್ಬೆಂಡಜಿಂ 50ಡಬ್ಲ್ಯೂಪಿ<br><br>ಟ್ರೈಸೈಕ್ಲಜೋಲ್ 75ಡಬ್ಲ್ಯೂಪಿ<br>ಎಡಿಫೆನ್‌ಫಾಸ್ 50ಇಸಿ<br>ಕಿಟಾಜಿನ್ 48ಇಸಿ<br>ಕಾರ್ಬೆಂಡಜಿಂ 50ಡಬ್ಲ್ಯೂಪಿ<br><br>ಟ್ರೈಸೈಕ್ಲಜೋಲ್ 75ಡಬ್ಲ್ಯೂಪಿ<br><br>ಕಾರ್ಬೆಂಡಜಿಂ 25% + ಮ್ಯಾಂಕೋಜೆಬ್ 50%ಡಬ್ಲ್ಯೂಪಿ<br><br>ಟ್ರೈಸೈಕ್ಲಜೋಲ್ 50%ಡಬ್ಲ್ಯೂಪಿ<br><br>ಟ್ರೈಪ್ಲೊಕ್ಸಿಸ್ಟ್ರೋಬಿನ್ 25%+ ಟೆಬುಕೋನಜೋಲ್ 50ಡಬ್ಲ್ಯೂಜಿ ಸಂಯುಕ್ತ | 4 ಗ್ರಾಂ.<br><br>0.6 ಗ್ರಾಂ.<br>1 ಮಿ.ಲೀ.<br>1 ಮಿ.ಲೀ.<br>1 ಗ್ರಾಂ.<br><br>0.6 ಗ್ರಾಂ.<br><br>4 ಗ್ರಾಂ./ಕೆ.ಜಿ.<br><br>0.4 ಗ್ರಾಂ/ಲೀ.<br><br>0.4 ಗ್ರಾಂ. | 4 ಗ್ರಾಂ./ಕೆ.ಜಿ. ಬೀಜಕ್ಕೆ<br>3 ಗ್ರಾಂ./ಕೆ.ಜಿ.ಬೀಜಕ್ಕೆ<br>50 ಮಿ.ಲೀ./50ಲೀ.<br>50 ಮಿ.ಲೀ.<br><br>200 ಗ್ರಾಂ./200 ಲೀ.<br>120 ಗ್ರಾಂ./1200 ಲೀ.<br>100 ಗ್ರಾಂ./25 ಕೆ.ಜಿ. ಬೀಜಕ್ಕೆ<br><br>80 ಗ್ರಾಂ.<br><br>80 ಗ್ರಾಂ. | 1) ಪ್ರತಿ ಕಿ.ಗ್ರಾಂ. ಬಿತ್ತನೆ ಬೀಜಕ್ಕೆ 4 ಗ್ರಾಂ. ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಿ ಬಿತ್ತಿ. 2) ಸಸಿಮಡಿಯಲ್ಲಿ ಬಿತ್ತನೆಯಾದ 10–12 ದಿನಗಳ ನಂತರ 50 ಲೀಟರ್ ದ್ರಾವಣ ಸಿಂಪಡಿಸಿ 3) ನಾಟಿ ಮಾಡಿದ 20–25 ದಿವಸಗಳ ನಂತರ ರೋಗ ಶೇ. 5ಕ್ಕಿಂತ ಜಾಸ್ತಿ ಇದ್ದಲ್ಲಿ 200ಲೀ. ದ್ರಾವಣ ಸಿಂಪಡಿಸಿ. ಹೂ ಬಿಡುವುದಕ್ಕೆ ಮುಂಚೆ ಹಾಗೂ ಅಗತ್ಯವಿದ್ದರೆ 10–12 ದಿನಗಳ ನಂತರ ಮತ್ತೆ 200 ಲೀ. ದ್ರಾವಣ ಸಿಂಪಡಿಸಿ.<br><br>ರೋಗದ ಲಕ್ಷಣಗಳು ಕಾಣಿಸಿಕೊಂಡ ತಕ್ಷಣ ಸಿಂಪಡಿಸುವುದು. ಅಗತ್ಯವಿದ್ದರೆ 15 ದಿನಗಳ ನಂತರ ಮತ್ತೆ ಸಿಂಪಡಿಸಿ. |
| **ಬೆಂಕಿ ರೋಗ &ಕಂದು ಚುಕ್ಕೆ ರೋಗ** –ಬಿತ್ತನೆಯ ಬೀಜವನ್ನು 0.5 ಗ್ರಾಂ./ಕೆ.ಜಿ. ಬೀಜದಂತೆ ಶಿಲೀಂಧ್ರ ನಾಶಕಗಳಾದ ಟ್ರೈಪ್ಲೊಕ್ಸಿಸ್ಟ್ರೋಬಿನ್ 25% +ಟೆಬುಕೋನಜೋಲ್ 50% ಮಿಶ್ರಣದಲ್ಲಿ ನೆನೆಸಿ ನಂತರ ನೆರಳಿನಲ್ಲಿ ಒಣಗಿಸಿ ಸಸಿಮಡಿಗೆ ಬಿತ್ತನೆ ಮಾಡಬೇಕು;ಎಲೆಕವಚ ಕೊಳೆರೋಗ ಮತ್ತು ಕುತ್ತಿಗೆ ಬೆಂಕಿರೋಗ ಕಂಡ ತಕ್ಷಣ ಮತ್ತು ಶೇ. 5 ರಷ್ಟು ತೆನೆಗಳು ಬಂದಾಗ ಶಿಲೀಂದ್ರ ಮಿಶ್ರಣವಾದ ಟ್ರೈಸೈಕ್ಲಜೋಲ್ 45% + ಹೆಕ್ಸಾಕೋನಜೋಲ್ 10% ಡಬ್ಲ್ಯೂಜಿ @1 ಗ್ರಾಂ./ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ. | | | | | |
| **ಎಲೆ ಕವಚ ಒಣಗುವ ರೋಗ** | ಎಲೆಯ ಕವಚದ ಮೇಲೆ ಕಂದು ಅಂಚುಳ್ಳ ಹುಲ್ಲಿನ ಬಣ್ಣದ ಉದ್ದ ಮಚ್ಚೆಗಳು ಕಾಣಿಸಿಕೊಂಡು ಎಲೆಗಳು ಒಣಗುತ್ತವೆ. | ಕಾರ್ಬೆಂಡಜಿಂ 25% + ಪ್ರೊಪಿಕೋನಜೋಲ್ 12.5ಎಸ್‌ಸಿ<br><br>ಟ್ರೈಸೈಕ್ಲೋಜೋಲ್ 45% + ಹೆಕ್ಸಾಕೋನಜೋಲ್ 10ಡಬ್ಲ್ಯೂಜಿ<br><br>ಕಾರ್ಬೆಂಡಜಿಂ 50ಡಬ್ಲ್ಯೂಪಿ<br>ಪ್ರೊಪಿಕೋನಜೋಲ್ 25ಇಸಿ<br><br>ಹೆಕ್ಸಾಕೋನಜೋಲ್ 5ಇಸಿ<br>ಸುಡೋಮೊನಾಸ್‌ಫ್ಲೊರೆಸೆನ್ಸ್(ಜೈವಿಕ)<br><br>ಟ್ರೈಫಾಕ್ಸಿಸ್ಟ್ರೋಬಿನ್ 25% + ಟೆಬುಕೋನಜೋಲ್ 50ಡಬ್ಲ್ಯೂಪಿ (ಸಂಯುಕ್ತ) | 2 ಮಿ.ಲೀ.<br><br>1 ಗ್ರಾಂ.<br><br>1 ಗ್ರಾಂ.<br>1ಮಿ.ಲೀ.<br><br>2 ಮಿ.ಲೀ.<br>100ಮಿ.ಲೀ.<br><br>0.4 ಗ್ರಾಂ. | 400 ಮಿ.ಲೀ.<br><br>200 ಗ್ರಾಂ.<br><br>200 ಗ್ರಾಂ.<br>400 ಮಿ.ಲೀ.<br><br>400 ಮಿ.ಲೀ.<br>–<br><br>80 ಗ್ರಾಂ. | ಗದ್ದೆಯಲ್ಲಿರುವ ನೀರನ್ನು ಬಸಿದು ದ್ರಾವಣವನ್ನು ಬುಡಭಾಗಕ್ಕೆ ತೋಯಿಸಬೇಕು ಕೊನೆ ಗರಿ ಬಂದಾಗ ಸಿಂಪಡಿಸಿ (ಎಕರೆಗೆ 250 ಲೀ. ಸಿಂಪರಣಾ ದ್ರಾವಣ) ಅವಶ್ಯವಿದ್ದಲ್ಲಿ 15 ದಿನಗಳ ನಂತರ ಮತ್ತೆ ಸಿಂಪಡಿಸಿ.<br><br>ರೋಗದ ಲಕ್ಷಣಗಳು ಕಾಣಿಸಿಕೊಂಡ ತಕ್ಷಣ ಸಿಂಪಡಿಸುವುದು. ಅಗತ್ಯವಿದ್ದರೆ 15 ದಿನಗಳ ನಂತರ ಮತ್ತೆ ಸಿಂಪಡಿಸಿ. |

| | | | | | |
|---|---|---|---|---|---|
| ಪೈರಿನ ಬೇರುಗಳನ್ನು ಸ್ಯೂಡೋಮೊನಾಸ್ ಫ್ಲೂರೊಸೆನ್ಸ್ ಎಂಬ ಜೈವಿಕ ವಸ್ತುವಿನಿಂದ (10 ಮಿ.ಲೀ./ಲೀ. ನೀರಿನಲ್ಲಿ ಬೆರೆಸಿದ ದ್ರಾವಣದಲ್ಲಿ) 30 ನಿಮಿಷಗಳ ಕಾಲ ಉಪಚರಿಸಿ ಮತ್ತು ಸ್ಯೂಡೋಮೊನಾಸ್ ಫ್ಲೂರೊಸೆನ್ಸ್ ಬೆರೆಸಿದ ದ್ರಾವಣವನ್ನು (5 ಮಿ.ಲೀ./ಲೀ. ನೀರಿನಲ್ಲಿ) ನಾಟಿ ಮಾಡಿದ 45 ಮತ್ತು 55 ದಿನಗಳಲ್ಲಿ ಸಿಂಪಡಿಸಿ. ಪ್ರತಿ ಎಕರೆಗೆ 250 ಲೀ. ಜೈವಿಕ ದ್ರಾವಣ ಬೇಕಾಗುತ್ತದೆ; ಕಾರ್ಬೆಂಡಜಿಂ 25% + ಫ್ಲೂಸಿಲಝೋಲ್ 12.5%ಎಸ್ಇ @960 ಮಿ.ಲಿ./ಹೆ. ಸಿಂಪಡಿಸಿ. | | | | | |
| **ತೆನೆ ಕವಚ ಕೊಳೆ ರೋಗ** | ಬಾವುಟದ ಗರಿಯ ಕವಚದ ಮೇಲೆ ಕಂದು ಚುಕ್ಕೆಗಳಾಗಿ ತೆನೆಯು ಸ್ವಲ್ಪ ಮಾತ್ರ ಹೊರಬರುತ್ತದೆ. | ಕಾರ್ಬೆಂಡಜಿಂ 50ಡಬ್ಲ್ಯೂಪಿ | 1 ಗ್ರಾಂ. | 200 ಗ್ರಾಂ. | ಎಕರೆಗೆ 200 ಲೀ. ಸಿಂಪರಣಾ ದ್ರಾವಣ ಬೇಕಾಗುತ್ತದೆ. ರೋಗ ತೀವ್ರತೆಗೆ ಅನುಗುಣವಾಗಿ ಅವಶ್ಯಕವಿದ್ದಲ್ಲಿ 15 ದಿನಗಳ ನಂತರ ಮತ್ತೊಮ್ಮೆ ಸಿಂಪಡಿಸಿ. |
| | | ಟ್ರೈಫಾಕ್ಸಿಸ್ಟ್ರೋಬಿನ್ 25 + ಟೆಬುಕೋನಜೋಲ್ 50%ಡಬ್ಲ್ಯೂಜಿ (ಸಂಯುಕ್ತ) | 0.4 ಗ್ರಾಂ. | 80 ಗ್ರಾಂ. | ರೋಗದ ಲಕ್ಷಣಗಳು ಕಾಣಿಸಿಕೊಂಡ ತಕ್ಷಣ ಸಿಂಪಡಿಸುವುದು. ಅಗತ್ಯವಿದ್ದರೆ 15 ದಿನಗಳ ನಂತರ ಮತ್ತೆ ಸಿಂಪಡಿಸಿ. |
| **ಕುತ್ತಿಗೆ ಬೆಂಕಿ ರೋಗ** | ತೆನೆಯ ಕೆಳಭಾಗದಲ್ಲಿ ಕತ್ತಿನ ಮೇಲೆ ಕಪ್ಪು ಅಥವಾ ಕಂದು ಬಣ್ಣದ ಮಚ್ಚೆ ಕಾಣಿಸಿಕೊಂಡು ತೆನೆ ಜೊಳ್ಳಾಗುತ್ತದೆ, ಕೆಲವೊಂದು ಸಂದರ್ಭಗಳಲ್ಲಿ ಕತ್ತಿನ ಭಾಗ ಮುರಿದು ತೆನೆ ಜೋತು ಬೀಳುವುದು | ಟ್ರೈಸೈಕ್ಲಜೋಲ್ 75ಡಬ್ಲ್ಯೂಪಿ<br>ಟ್ರೈಸೈಕ್ಲಜೋಲ್ 45% + ಹೆಕ್ಸಾಕೋನಜೋಲ್ 10%ಡಬ್ಲ್ಯೂಜಿ | 0.6 ಗ್ರಾಂ.<br>1 ಗ್ರಾಂ. | 120 ಗ್ರಾಂ. | ಶೇ. 50 ರಷ್ಟು ಹೂ ಬಿಡುವ ಸಮಯದಲ್ಲಿ ಒಂದು ಬಾರಿ 200 ಲೀ. ಸಿಂಪರಣಾ ದ್ರಾವಣವನ್ನು ಸಿಂಪಡಿಸಬೇಕು. |
| ಬೀಜದಿಂದ ಪ್ರಸಾರವಾಗುವ ಶಿಲೀಂಧ್ರ ರೋಗಗಳು – 25 ಕೆಜಿ ಬಿತ್ತನೆಯ ಬೀಜವನ್ನು ಕಾರ್ಬೆಂಡಜಿಂ50ಡಬ್ಲ್ಯೂಪಿ @4ಗ್ರಾಂ./ಲೀ. ಅಥವಾ ಟ್ರೈಸೈಕ್ಲಜೋಲ್ 75ಡಬ್ಲ್ಯೂಪಿ @3 ಗ್ರಾಂ./ಲೀ. ಅಥವಾ ಕಾರ್ಬೆಂಡಜಿಂ 25%ಡಬ್ಲ್ಯೂಸ್ + ಮ್ಯಾಂಕೋಜೆಬ್ 50%ಡಬ್ಲ್ಯೂಸ್ @4 ಗ್ರಾಂ./ಲೀ.)ತಯಾರಿಸಿದ ದ್ರಾವಣದಲ್ಲಿ 12 ಗಂಟೆ ನೆನೆಸಿ, ನಂತರ 24–48 ಗಂಟೆ ಒದ್ದೆ ಗೋಣಿಚೀಲದಲ್ಲಿ ಸುತ್ತಿ ಬೀಜ ಮೊಳಕೆಯೊಡೆಯುವ ಮುನ್ನ ಬಿತ್ತನೆ ಮಾಡುವುದು. | | | | | |
| ಬೆಂಕಿರೋಗ, ಎಲೆಕವಚ ಕೊಳೆರೋಗ ಮತ್ತು ಕುತ್ತಿಗೆ ಬೆಂಕಿರೋಗ ಕಂಡ ತಕ್ಷಣಟ್ರೈಫ್ಲಾಕ್ಸಿಸ್ಟ್ರೋಬಿನ್ 25% + ಟೆಬುಕೋನಜೋಲ್ 50% (ನೇಟಿವೋ 75ಡಬ್ಲೂಜಿ) @4 ಮಿ.ಲೀ./ಲೀ. ನಂತೆ ಸಿಂಪಡಿಸಿ, 15 ದಿನಗಳ ನಂತರ ಮತ್ತೊಮ್ಮೆ ಸಿಂಪಡಿಸಿ. | | | | | |

**ಸೂಚನೆ:**

1. ಕೀಟ ಹಾಗೂ ರೋಗ ಬಾಧೆಯ ಲಕ್ಷಣಗಳು ಕಂಡುಬಂದಲ್ಲಿ ಮಾತ್ರ ಸಸ್ಯ ಸಂರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳಿ, ಯಾವ ಪ್ರದೇಶದಲ್ಲಿ ಕೀಟ ಮತ್ತು ರೋಗ ಬಾಧೆ ಪ್ರತಿ ವರ್ಷವೂ ತಪ್ಪದೆ ಬರುತ್ತದೆಯೋ ಅಂತಹ ಪ್ರದೇಶಗಳಲ್ಲಿ ಕೀಟ ಹಾಗೂ ರೋಗಗಳು ಕಾಣಿಸಿಕೊಳ್ಳುವುದಕ್ಕೆ ಮೊದಲೇ ಸಸ್ಯ ಸಂರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳಿ. ಮುಖ್ಯವಾಗಿ ಕುತ್ತಿಗೆ ಬೆಂಕಿರೋಗಕ್ಕೆ ಹೂ ಬಿಡುವ(ಶೇ5%) ಮೊದಲೇ ಸಿಂಪರಣೆ ಕೈಗೊಳ್ಳುವುದು ಉತ್ತಮ.
2. ಇಲ್ಲಿ ಶಿಫಾರಸು ಮಾಡಿರುವ ಸಸ್ಯ ಸಂರಕ್ಷಣಾ ರಾಸಾಯನಿಕಗಳ ಪ್ರಮಾಣ ಕೈ ಚಾಲಿತ (ದೊಡ್ಡ ಪ್ರಮಾಣ) ಸಿಂಪರಣ ಯಂತ್ರಗಳಿಗೆ ಮಾತ್ರ ಅನ್ವಯಿಸುತ್ತದೆ.
3. ಹೊಂದಾಣಿಕೆ ಇರುವ ಕೀಟನಾಶಕ ಮತ್ತು ಶಿಲೀಂಧ್ರನಾಶಕಗಳನ್ನು ಬೆರೆಸಿ, ಒಟ್ಟಿಗೆ ಸಿಂಪರಣೆ ಮಾಡಿ. ಇವುಗಳ ಹೊಂದಾಣಿಕೆ ಬಗ್ಗೆ ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಸಸ್ಯ ಸಂರಕ್ಷಣಾ ರಾಸಾಯನಿಕಗಳ ಹೊಂದಾಣಿಕೆ ಪಟ್ಟಿ ನೋಡಿ.

ಮಾಡುವುದು. ಮಣ್ಣಿನ ಫಲವತ್ತತೆಗೆ ಅನುಗುಣವಾಗಿ 1 ಅಡಿ ಅಂತರದಲ್ಲಿ ಕೂರಿಗೆಯಿಂದ ಸಾಲುಗಳನ್ನು ಮಾಡುವುದು. ಪ್ರತಿಯೊಂದು ಸಾಲಿನಲ್ಲಿ 1 ಅಡಿ ಅಂತರದಲ್ಲಿ ಎರಡು ಬೀಜಗಳನ್ನು 2 ಅಂಗುಲ ಆಳದಲ್ಲಿ ಊರುವುದು. ಒಣ ಭೂಮಿಯಲ್ಲಿ ಬಿತ್ತನೆ ಮಾಡಿದ ನಂತರ ನೀರು ಹಾಯಿಸದಿದ್ದರೆ ಪುನಃ 3 ದಿನಕ್ಕೆ ನೀರು ಹಾಯಿಸುವುದು ಅವಶ್ಯಕ. ಇಲ್ಲದಿದ್ದರೆ ಬೀಜ ಮೊಳಕೆಯೊಡೆದು ಮಣ್ಣಿನಿಂದ ಹೊರಗೆ ಬರುವುದು ಕುಂಠಿತವಾಗುತ್ತದೆ. ನಂತರ ಪ್ರತಿ 5 ದಿನಕ್ಕೊಮ್ಮೆ ನೀರು ಹಾಯಿಸುವುದು.

| ತಳಿಗಳು | ಬಿತ್ತನೆ ಕಾಲ | | ಕಾಲಾವಧಿ (ದಿನಗಳು) | ಇಳುವರಿ (ಕ್ವಿಂ./ಎ) | ವಿಶೇಷ ಗುಣಗಳು |
|---|---|---|---|---|---|
| | ಮುಂಗಾರು | ಬೇಸಿಗೆ | | | |
| ದಕ್ಷ (ಕೆ.ಎಂ.ಪಿ.–175) | – | ಫೆಬ್ರವರಿ 2ನೇ ವಾರದೊಳಗೆ | 115–120 | – | ಅಕ್ಕಿ ಮಧ್ಯಮ ಸಣ್ಣ ವರ್ಗಕ್ಕೆ ಸೇರಿದೆ. ಗಿಡವು ಎತ್ತರವಾಗಿ ಬೆಳೆದು ಅಧಿಕ ಹುಲ್ಲಿನ ಇಳುವರಿ ನೀಡುತ್ತದೆ. |
| ಶಾರದ (ಎಂ.ಎ.ಎಸ್–946) | – | – | 110–120 | – | ಅಕ್ಕಿ ಮಧ್ಯಮ–ದಪ್ಪನೆಯ ವರ್ಗಕ್ಕೆ ಸೇರಿದೆ. ಅವಲಕ್ಕಿ ಮಾಡಲು ಹೆಚ್ಚು ಸೂಕ್ತ. |
| ಒಣಸಿರಿ (ಎಂ.ಎ.ಎಸ್.–26) | ಜೂನ್–ಜುಲೈ | – | 100–110 | 16–18 | ಅಕ್ಕಿ ಮಧ್ಯಮ ಸಣ್ಣ ವರ್ಗಕ್ಕೆ ಸೇರಿದೆ. |
| ಅನಘಾ (ಬಿ.ಎ–33/ ಎ.ಆರ್.ಬಿ–6) | – | – | 120–125 | – | ಅಕ್ಕಿ ಮಧ್ಯಮ–ದಪ್ಪನೆಯ ವರ್ಗಕ್ಕೆ ಸೇರಿದೆ. ಅವಲಕ್ಕಿ ಮಾಡಲು ಹೆಚ್ಚು ಸೂಕ್ತ. |
| ರಾಶಿ | – | – | 120–125 | – | ಅಕ್ಕಿ ಮಧ್ಯಮ ಸಣ್ಣ ವರ್ಗಕ್ಕೆ ಸೇರಿದೆ. |

**ರಸಗೊಬ್ಬರ ನಿರ್ವಹಣೆ:** ಬಿತ್ತನೆ ಸಮಯಲ್ಲಿ ಶಿಫಾರಸ್ಸು ಮಾಡಿದ ಪ್ರಮಾಣದ ಶೇಕಡ 50 ರಷ್ಟು ಸಾರಜನಕ ಮತ್ತು ಪೊಟ್ಯಾಷ್ ಹಾಗೂ ಪೂರ್ತಿ ರಂಜಕ ಪೋಷಕಾಂಶಗಳನ್ನು ಸಾಲಿನಲ್ಲಿ ಹಾಕುವುದು. ಶೇ. 25ರಷ್ಟು ಸಾರಜನಕ ಹಾಗೂ ಶೇ. 50ರಷ್ಟು ಪೊಟ್ಯಾಷನ್ನು ಬಿತ್ತಿದ 30 ದಿನಗಳ ನಂತರ ಮೇಲುಗೊಬ್ಬರವಾಗಿ ಕೊಡುವುದು. ಉಳಿದ ಶೇ. 25 ರಷ್ಟು ಸಾರಜನಕವನ್ನು ಮುಂದಿನ ಒಂದು ತಿಂಗಳ ಅಂತರದಲ್ಲಿ ಮೇಲುಗೊಬ್ಬರವಾಗಿ ಕೊಡುವುದು. ಭೂಮಿಯ ಫಲವತ್ತತೆ ಹಾಗೂ ಪೋಷಕಾಂಶಗಳ ಲಭ್ಯತೆಯ ಅನುಗುಣವಾಗಿ ಕೆಲವು ಮಣ್ಣುಗಳಲ್ಲಿ ಬಿತ್ತಿದ 35 ರಿಂದ 45 ದಿನಗಳ ಅಂತರದಲ್ಲಿ ಕಬ್ಬಿಣ ಮತ್ತು ಗಂಧಕದ ಪೋಷಕಾಂಶಗಳ ಕೊರತೆಯಿಂದಾಗಿ ಬೆಳೆ ಹಳದಿ ಬಣ್ಣಕ್ಕೆ ತಿರುಗಿದರೆ ಕಬ್ಬಿಣಾಂಶವಿರುವ ಮಲ್ಟಿಪ್ಲೆಕ್ಸ್ ಸೂಕ್ಷ್ಮ ಪೋಷಕಾಂಶ (2ಮಿ.ಲೀ./ ಲೀ. ನೀರಿಗೆ) ಸಿಂಪರಣೆ ಮಾಡುವುದರಿಂದ ಈ ಕೊರತೆಯನ್ನು ನಿವಾರಿಸಬಹುದು.

**ನೀರಿನ ನಿರ್ವಹಣೆ:** ಬಿತ್ತನೆಯಿಂದ ಕೊಯ್ಲಿಗೆ ಬರುವವರೆಗೆ ಪ್ರತಿ 5 ದಿನಕ್ಕೊಮ್ಮೆ ನೀರು ಹಾಯಿಸುವುದು ಸೂಕ್ತ. ಬಿತ್ತನೆಯಾದ 75 ರಿಂದ 110 ದಿನಗಳವರೆಗಿನ ಅವಧಿಯಲ್ಲಿ ಮಣ್ಣಿನಲ್ಲಿ ನೀರಿನ ಅಂಶ ಕಡಿಮೆಯಾಗದಂತೆ ನೋಡಿಕೊಳ್ಳುವುದು, ಇಲ್ಲದಿದ್ದರೆ ತೆನೆ ಜೊಳ್ಳಾಗುವ ಸಂಭವ ಹೆಚ್ಚಾಗುತ್ತದೆ.

**ಏರೋಬಿಕ್ ಭತ್ತದಲ್ಲಿ ಹನಿ ನೀರಾವರಿ:** ಇತ್ತೀಚಿನ ದಿನಗಳಲ್ಲಿ ಹನಿ ನೀರಾವರಿ ಪದ್ಧತಿಯು ಹೆಚ್ಚು ಪ್ರಚಲಿತವಾಗಿದ್ದು ಇದನ್ನು ಏರೋಬಿಕ್ ಭತ್ತದ ಉತ್ಪಾದನೆಯಲ್ಲೂ ಅಳವಡಿಸಿಕೊಳ್ಳುವುದರಿಂದ ಶೇಕಡ 50–60ರಷ್ಟು ನೀರನ್ನು ಉಳಿಸಿ, ಅಧಿಕ ಇಳುವರಿ ಪಡೆಯಬಹುದು. ಭತ್ತದಲ್ಲಿ ಹನಿ ನೀರಾವರಿಯನ್ನು ಅಳವಡಿಸಿಕೊಳ್ಳಲು 16 ಮಿಲಿ ಮೀ. ವ್ಯಾಸದ ಅಡ್ಡ ನಳಿಕೆಗಳನ್ನು ಸಾಲು ಬಿಟ್ಟು ಸಾಲಿಗೆ ಹಾಕುವುದು. ಪ್ರತಿ ದಿವಸ 2 ರಿಂದ 3 ಘಂಟೆ ಸಮಯ ನೀರನ್ನು ಹಾಯಿಸುವುದು. ಹೆಚ್ಚಿನ ಮಾಹಿತಿಯನ್ನು ಪೂರಕ ಕೈಪಿಡಿಯಲ್ಲಿ ಪಡೆಯಬಹುದು.

**ನೀರಿನ ಅವಶ್ಯಕತೆಯ ಸಂದಿಗ್ಧ ಹಂತಗಳು**

- ಮೊಳಕೆಯೊಡೆಯುವ ಹಂತ
- ತೆಂಡೆ ಬರುವ ಹಂತ

– ಗರ್ಭಾಂಕುರದಿಂದ ಕಾಳು ತುಂಬುವವರೆಗೆ

ಈ ಹಂತಗಳಲ್ಲಿ ಮಣ್ಣಿನಲ್ಲಿ ಸಾಕಷ್ಟು ತೇವಾಂಶವಿರುವಂತೆ ಗಮನ ಹರಿಸುವುದು.

**ಅಂತರ ಬೇಸಾಯ:** ಸುಮಾರು 15 ರಿಂದ 20 ದಿನಗಳಲ್ಲಿ ಕುಂಟೆ ಉಪಯೋಗಿಸಿ ಅಂತರ ಬೇಸಾಯ ಮಾಡಿದರೆ ಕಳೆಗಳನ್ನು ಪೂರ್ತಿಯಾಗಿ ನಿವಾರಣೆ ಮಾಡಬಹುದು. ಈ ರೀತಿಯಾಗಿ ಪ್ರತಿ 12–15 ದಿನಗಳ ಅಂತರದಲ್ಲಿ ಆಳವಾಗಿ ಅಂತರ ಬೇಸಾಯ ಮಾಡುವುದರಿಂದ ಕಳೆಗಳ ನಿಯಂತ್ರಣದ ಜೊತೆಗೆ, ಮಣ್ಣಿನಲ್ಲಿ ಗಾಳಿಯಾಡುವುದರಿಂದ ಆಳವಾದ ಮತ್ತು ಶಕ್ತಿಯುತವಾದ ಬೇರಿನ ಬೆಳವಣಿಗೆಯಾಗಿ ಅಧಿಕ ತೆಂಡೆಗಳನ್ನು ಪಡೆಯಬಹುದು. ಅಂತರ ಬೇಸಾಯದಿಂದ ಮಣ್ಣು ಸಡಿಲವಾಗಿ ಅಧಿಕ ಪ್ರಮಾಣದಲ್ಲಿ ನೀರನ್ನು ಹಿಡಿದಿಟ್ಟುಕೊಳ್ಳುತ್ತದೆ. ಆದ್ದರಿಂದ ಅಂತರ ಬೇಸಾಯ ಅರೆ ನೀರಾವರಿ ಪದ್ಧತಿಯಲ್ಲಿ ಬಹುಮುಖ್ಯವಾಗಿದೆ.

**ಕಳೆ ನಿರ್ವಹಣೆ:** ಬಿತ್ತನೆ ದಿವಸ ಅಥವಾ ಮಾರನೆಯ ದಿವಸ ಎಕರೆಗೆ ಶೇ. 10ರ ಪೈರಜೋಸಲ್ಫುರಾನ್ ಈಥೈಲ್ 100 ಗ್ರಾಂ. ಪುಡಿ ಅಥವಾ ಆಕ್ಸಿಫ್ಲೋರೋಫೆನ್ 23.5 ಇ.ಸಿ. 160 ಮಿ.ಲೀ. ಅನ್ನು 300 ಲೀಟರ್ ನೀರಿನಲ್ಲಿ ಕರಗಿಸಿ ಮಣ್ಣಿನ ಮೇಲೆಲ್ಲಾ ಸಿಂಪಡಿಸುವುದು. ಸಿಂಪರಣೆ ಮಾಡುವಾಗ ಹಿಮ್ಮುಖವಾಗಿ ಚಲಿಸಿ. ಸಿಂಪರಣೆ ಸಮಯದಲ್ಲಿ ಮಣ್ಣಿನಲ್ಲಿ ಸಾಕಷ್ಟು ತೇವಾಂಶವಿರಬೇಕು ಮತ್ತು ಹೆಚ್ಚು ಹೆಂಟೆಗಳಿರದಂತೆ ಎಚ್ಚರವಹಿಸುವುದು. ಇದರಿಂದ ಬೀಜದಿಂದ ಪ್ರಸಾರವಾಗುವ ಕಳೆಗಳನ್ನು ಹತೋಟಿ ಮಾಡಬಹುದು. ಕಳೆನಾಶಕದ ಪ್ರಮಾಣ ಹೆಚ್ಚಾದಲ್ಲಿ ಭತ್ತದ ಮೊಳಕೆ ಕಡಿಮೆಯಾಗುತ್ತದೆ. ಹೆಚ್ಚು ಕಳೆ ಕಂಡಲ್ಲಿ ಬಿತ್ತಿದ 40–50 ದಿವಸಗಳಲ್ಲಿ ಒಂದು ಸಾರಿ ಕೈಯಿಂದ ಕಳೆ ತೆಗೆಯುವುದು ಸೂಕ್ತ.

ಏರೋಬಿಕ್ ಪದ್ಧತಿಯಲ್ಲಿ ಹೆಚ್ಚು ಗಾಳಿಯ ಸಂಚಾರದಿಂದ ಮತ್ತು ಬೆಳೆಯಲ್ಲಿ ಆರ್ದ್ರತೆಯ ಅಂಶ ಕಡಿಮೆ ಇರುವುದರಿಂದ ಪೀಡೆಗಳ ಬಾಧೆ ಕಡಿಮೆ.

**ಸಸ್ಯ ಸಂರಕ್ಷಣೆ:** ನೀರಾವರಿ ಭತ್ತದ ಬೆಳೆಗೆ ಸೂಚಿಸಿದ ಕ್ರಮಗಳನ್ನೇ ಅನುಸರಿಸುವುದು.

**ಏರೋಬಿಕ್ ಅಥವಾ ಅರೆನೀರಾವರಿ ಪದ್ಧತಿಯ ಬೇಸಾಯದಿಂದಾಗುವ ಪ್ರಯೋಜನಗಳು**

- ನೇರ ಬೀಜ ಬಿತ್ತನೆ.
- ಶೇ.40–50 ರಷ್ಟು ನೀರಿನ ಉಳಿತಾಯ ಹಾಗೂ ನೀರಿನ ಸಮರ್ಪಕ ಬಳಕೆ.
- ಕೆಸರುಗದ್ದೆ ಸಸಿಮಡಿ ತಯಾರಿ ಮತ್ತು ನಾಟಿ ಮಾಡುವ ಅವಶ್ಯಕತೆಯಿರುವುದಿಲ್ಲ
- ಒತ್ತಡ ಸಹಿಷ್ಣತೆ ಮತ್ತು ಬರ ನಿರೋಧಕ ಶಕ್ತಿಯನ್ನು ಹೊಂದಿವೆ.
- ಮಧ್ಯಮ ಅವಧಿಯ ತಳಿಗಳು.
- ಮಣ್ಣಿನ ಕಣ ರಚನೆಯಲ್ಲಿ ಸುಧಾರಣೆ.
- ಹೆಚ್ಚಿನ ಸಂಖ್ಯೆಯಲ್ಲಿ ತೆಂಡೆಗಳು ಮತ್ತು ಸಸ್ಯ ಬೀಳುವಿಕೆ ಕಡಿಮೆ.
- ರಸಗೊಬ್ಬರಗಳ ಸಮರ್ಪಕ ಬಳಕೆ.
- ಶೇ.80ರಷ್ಟು ಬಿತ್ತನೆ ಬೀಜದ ಉಳಿತಾಯ (3 ಕಿ.ಗ್ರಾಂ./ಎ).
- ತೆಂಡೆ/ಕವಲುಗಳ ಸಂಖ್ಯೆಯಲ್ಲಿ ಹೆಚ್ಚಳ.
- ಶೇ.30ರಷ್ಟು ಕೂಲಿ ಕಾರ್ಮಿಕರ ದುಡಿಮೆಯ ಉಳಿತಾಯ.
- ಕೆಸರು ಗದ್ದೆ ಇಲ್ಲದಿರುವುದರಿಂದ ಮೀಥೇನ್ (Methane) ಅನಿಲದ ಉತ್ಪಾದನೆ ಕಡಿಮೆ. ಆದುದರಿಂದ ಪರಿಸರ ಮಾಲಿನ್ಯ ಕಡಿಮೆ.
- ಶ್ರಮ ಮತ್ತು ಸಮಯದ ಉಳಿತಾಯ ; ಮತ್ತು
- ಸೊಳ್ಳೆಗಳ ನಿಯಂತ್ರಣದ ಸಾಧ್ಯತೆ.